ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸುವುದು

೩೫೨. ಶ್ರೀ ಕ್ವಾಮರುಲ್ ಇಸ್ಲಾಂ (ಗುಲ್ಬರ್ಗ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ದ್ವಿಚಕ್ರ ವಾಹನಗಳ ಚಾಲಕರು ಶಿರಸ್ತ್ರಾಣ (ಹೆಲ್ಮೆಟ್) ಧರಿಸುವುದನ್ನು ಕಡ್ಡಾಯಗೊಳಿಸಿರುವುದನ್ನು ವಿನಾಯಿತಿಸಿ, ಐಚ್ಛಿಕಗೊಳಿಸಿರುವುದು ನಿಜವೆ ?

ಆ) ಆಂಧ್ರ ಪ್ರದೇಶ, ತಮಿಳುನಾಡು, ಮತ್ತು ಉತ್ತರ ಪ್ರದೇಶ ರಾಜ್ಯಗಳು ಶಿರಸ್ತ್ರಾಣ ಧರಿಸುವುದನ್ನು ಐಚ್ಛಿಕಗೊಳಿಸಿರುವುದು ನಿಜವೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು).—

ಅ) ಇಲ್ಲ.

ಆ) ಮಾಹಿತಿಯು ಲಭ್ಯವಿಲ್ಲ.

ವಸ್ತು ಪ್ರದರ್ಶನ ಮತ್ತು ಇಳುವರಿ ಮಾರಾಟದಿಂದ ವಸೂಲಾದ ಮೊತ್ತ

೧೦೮. ಶ್ರೀ ಡಿ. ಎ. ಚಿನ್ನಪ್ಪ (ಪಡಿಕೇರಿ) .—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ವಸ್ತು ಪ್ರದರ್ಶನ ಮತ್ತು ಇಳುವರಿ ಮಾರಾಟ ಎಂದು ಪ್ರಚಾರಪಡಿಸಿ ಪುಸ್ತಕ ಮತ್ತು ಬಟ್ಟೆ ಇವುಗಳನ್ನು ಮಾರಾಟ ಮಾಡುವವರಿಂದ ಸರ್ಕಾರ ವಸೂಲಿ ಮಾಡಿದ ಮೊಬಲಗೆಷ್ಟು ? ಮತ್ತು ಇದನ್ನು ಎಷ್ಟು ಅವಧಿಯವರೆಗೆ ವಸೂಲಿ ಮಾಡಲಾಗುವುದು ;

ಆ) ಒಟ್ಟು ಮಾರಾಟವಾಗುವ ವಸ್ತುಗಳ ಮೊತ್ತಕ್ಕೆ ಮಾಟಗಾರರಿಂದ ವಸೂಲಾಗುವ ಮೊತ್ತವನ್ನು ಹೋಲಿಸಿದರೆ ಇದು ಅತ್ಯಲ್ಪ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಸರ್ಕಾರ ವಸೂಲಿ ಮಾಡುವ ದರವನ್ನು ಮಾರಾಟವಾಗುವ ಹಣದ ಮೊತ್ತಕ್ಕೆ ಸರಿಸಮಾನವಾಗಿ ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) .—

ಅ) ಪುಸ್ತಕ ಮತ್ತು ಬಟ್ಟೆಯ ಮಾರಾಟವು, ಮಾರಾಟ ತೆರಿಗೆಯಿಂದ ವಿನಾಯಿತಿ ಪಡೆದಿದೆ. ಆದುದರಿಂದ ಈ ಎರಡು ವಸ್ತುಗಳ ಮೇಲೆ ಮಾರಾಟ ತೆರಿಗೆ ವಸೂಲಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) –ಆದೇ–

ರಾಜ್ಯದಲ್ಲಾದ ಕೋಮು–ಗಲಭೆಗಳ ಸಂಖ್ಯೆ

೧೦೩. ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) .—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೯ನೇ ಸಾಲಿನ ಡಿಸೆಂಬರ್‌ನಿಂದ ಈ ವರೆವಿಗೂ ರಾಜ್ಯದಲ್ಲಿ ಸಂಬಂಧಿಸಿದ ಒಟ್ಟು ಕೋಮು ಗಲಭೆಗಳು ಎಷ್ಟು ?

ಆ) ಈ ಗಲಭೆಗಳಿಂದ ಉಂಟಾಗಿರುವ ನಷ್ಟವೇನು ? ಮತ್ತು ಸರ್ಕಾರಕ್ಕೆ ವರದಿಯಾಗಿರುವುದು ಎಷ್ಟು ;

ಇ) ಇದುವರೆವಿಗೆ ಎಷ್ಟು ಪರಿಹಾರವನ್ನು ನೀಡಲಾಗಿದೆ ;

ಈ) ಇವನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) .—

ಅ) ಇಲ್ಲ

ಆ) ರೂ. ೪,೫೭,೬೦,೮೯೪-೦೦

ಇ) ರೂ. ೧.೪೮ ಕೋಟಿಗಳು

ಈ) (೧) ಮುಂಜಾಗರೂಕತಾ ಕ್ರಮವಾಗಿ ರೌಡಿಗಳು, ಪತೀಯ ಗೂಂಡಾಗಳು ಮತ್ತು ಸಮಾಜ ಘಾತುಕ ವ್ಯಕ್ತಿಗಳನ್ನು ಬಂಧಿಸಲಾಗಿದೆ.

(೨) ಗಲಭೆ ಸಂಭವಿಸಬಹುದಾದ ಸ್ಥಳಗಳಲ್ಲಿ ಸಶಸ್ತ್ರ ಪಡೆ ಮತ್ತು ಹೊಂ ಗಾರ್ಡ್ ಸಿಬ್ಬಂದಿಗಳನ್ನು ನೇಮಿಸಲಾಗಿದೆ.

(೩) ಮತೀಯ ಗಲಭೆ ಉಂಟಾಗಬಹುದಾದ ಸೂಕ್ಷ್ಮ ಸ್ಥಳಗಳಲ್ಲಿ ಸಂಜವರಿ ಪೋಲೀಸ್ ವಸ್ತು ವ್ಯವಸ್ಥೆಯನ್ನು ಮಾಡಲಾಗಿದೆ.

(೪) ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಲುವಾಗಿ ಪೋಲೀಸರಿಗೆ ಸಹಾಯ ಮಾಡಲು ವಿಶೇಷ ಪೋಲೀಸ್ ಅಧಿಕಾರಿಗಳನ್ನು ನೇಮಿಸಲಾಗಿದೆ.

(೫) ಕೋಮುವಾರು ಗಲಭೆಗಳನ್ನು ಉಂಟುಮಾಡುವಂತಹ, ಕೋಮುವಾರು ಭಾವನೆಗಳನ್ನು ಪ್ರಚೋದಿಸುವಂತಹ ಸಭೆ, ಮೆರವಣಿಗೆ ಮತ್ತು ಉತ್ಸವಗಳನ್ನು ನಿಷೇಧಿಸಲಾಗಿದೆ. ಮಸೀದಿ, ಈದ್ಗಾ, ಹಾಗೂ ದೇವಾಲಯಗಳು ಮುಂತಾದ ಪೂಜಾ ಮಂದಿರಗಳ ಹತ್ತಿರ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಗೃಹ ರಕ್ಷಕ ದಳ ಹಾಗೂ ಸಶಸ್ತ್ರ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ.

(೬) ಪ್ರಚೋದನಕಾರಿ ಕರಪತ್ರಗಳನ್ನು ಮುದ್ರಿಸುವ ಹಂಚುವವರ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ.

ಮೈಸೂರು ಪೇಪರ್ ಮಿಲ್ ಬಗ್ಗೆ

೧೫. ಶ್ರೀ ಪಿ. ಬೈರೇಗೌಡ (ಬೇಮಗಲ್) .—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಮೈಸೂರು ಕಾಗದದ ಕಾರ್ಖಾನೆಯು ಬೆಂಗಳೂರು ಕ್ಲಬಿನಲ್ಲಿ ನಿಗಮಿತ ಸದಸ್ಯತ್ವ ಪಡೆದಿದೆಯೇ ;

ಆ) ಈ ಕ್ಲಬ್‌ನಲ್ಲಿ ಸದಸ್ಯತ್ವ ಪಡೆಯಲು ಮೈಸೂರು ಕಾಗದದ ಕಾರ್ಖಾನೆ ಕೊಟ್ಟ ಮೊಬಲಗೆಷ್ಟು ;

ಇ) ಈ ಕ್ಲಬಿನ ಸದಸ್ಯರಾಗಿ ಮೈಸೂರು ಕಾಗದ ಕಾರ್ಖಾನೆ ನಾಮ ನಿರ್ದೇಶನ ಮಾಡಿರುವ ಅಧಿಕಾರಿಗಳ ಹೆಸರೇನು ?

ಈ) ಈ ಅಧಿಕಾರಿಗಳ ಕೇಂದ್ರ ಸ್ಥಾನ ಯಾವುದು ;

ಉ) ಈ ಅಧಿಕಾರಿಗಳನ್ನು ಕ್ಲಬಿನ ನಿಗಮಿತ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಕಾರಣಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) .—

ಅ) ಹೌದು

ಆ) ರೂ. ೧.೪ ಲಕ್ಷ

ಇ) ಶ್ರೀ ಕೆ. ಕೆ. ಮಿಶ್ರ ಹಿಂದಿನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಜೂನ್ ೯೦ರ ವರೆವಿಗೆ. ಶ್ರೀ ಪಿ. ಎಸ್. ಅಡ್ಕಂತಯ್ಯ, ಎಕ್ಸೆಕ್ಯೂಟೀವ್ ಡೈರೆಕ್ಟರ್. ಶ್ರೀ ಪಿ. ಸೋಮನಾಥ್, ಹಿಂದಿನ ಜನರಲ್ ಮ್ಯಾನೇಜರ್ (HID & P) ಸೆಪ್ಟೆಂಬರ್ ೯೦ ರ ವರೆವಿಗೆ. ಶ್ರೀ ಮೋಹನ್‌ದಾಸ್, ಜನರಲ್ ಮ್ಯಾನೇಜರ್ (P & C) ಅಕ್ಟೋಬರ್ ೯೦ ರಿಂದ.

(ಈ) ಶ್ರೀ ಮೋಹನ್‌ದಾಸ್‌ರವರನ್ನು ಹೊರತುಪಡಿಸಿ ಉಳಿದವರ ಕೇಂದ್ರ ಸ್ಥಾನ ಭದ್ರಾವತಿ.